






### ಕೆಂಪು ರಕ್ತ ಕಣಗಳು

ಕೆಂಪು ಪೆಪ್ಪರ್‌ಮೆಂಟ್ ತರಹ ಕಾಣುವ ಅಪ್ಪಚ್ಚಿ ತಟ್ಟೆ ಆಕಾರದ ಈ ಬಿಲ್ಲೆಗಳು ಮಾನವನ ರಕ್ತದಲ್ಲಿರುವ ಸಾಮಾನ್ಯ ಕೆಂಪು ರಕ್ತ ಕಣಗಳು. ದೇಹಕ್ಕೆ ಬೇಕಾಗುವ ಆಮ್ಲಜನಕದ ಪೂರೈಕೆಯ ಕೆಲಸವನ್ನು ಈ ಕಣಗಳು ಮಾಡುತ್ತವೆ. ಮಹಿಳೆಯರ ಪ್ರತಿ ಘನ ಮಿಲಿಮೀಟರ್ ರಕ್ತದಲ್ಲಿ 40 ರಿಂದ 50 ಲಕ್ಷ ಕೆಂಪು ರಕ್ತ ಕಣಗಳಿರುತ್ತವೆ. ಪುರುಷರಲ್ಲಿ 50 ರಿಂದ 60 ಲಕ್ಷದಷ್ಟಿರುತ್ತವೆ. ಸಾಮಾನ್ಯ ಸೂಕ್ಷ್ಮದರ್ಶಕದಲ್ಲಿ ಇಷ್ಟು ನಿಚ್ಚಳವಾಗಿ ಕೆಂಪು ರಕ್ತ ಕಣಗಳನ್ನು ನೋಡಲು ಸಾಧ್ಯವಿಲ್ಲ.

ಸಮುದ್ರ ಮಟ್ಟಕ್ಕಿಂತ ಅತೀ ಹೆಚ್ಚು ಎತ್ತರದಲ್ಲಿ ವಾಸಿಸುವ ಮತ್ತು ಆಮ್ಲಜನಕ ಕಡಿಮೆ ಇರುವ ವಾತಾವರಣದಲ್ಲಿ ಇರುವವರಿಗೆ ಕೆಂಪು ರಕ್ತ ಕಣಗಳ ಸಂಖ್ಯೆ ಹೆಚ್ಚು.

### ಸೀಳಿದ ಕೂದಲು

ಮುಖದ ಸೌಂದರ್ಯದಲ್ಲಿ ಕೂದಲಿನ ಪಾತ್ರ ದೊಡ್ಡದು. ಕೂದಲು ರಕ್ಷಣೆಗಾಗಿ ಮಹಿಳೆಯರು , ಪುರುಷರು ಮಾಡದ ಕಸರತ್ತಿಲ್ಲ. ಸೀಳು ಕೂದಲಿನ ದುರಸ್ತಿಗಾಗಿ ಹಚ್ಚದ ಎಣ್ಣೆ, ಗಿಡಮೂಲಿಕೆಗಳಿಲ್ಲ. ಬರಿ ಗಣ್ಣಿಗೆ ಕಾಣುವ ಸೀಳಿದ ಕೂದಲಿನ ಮುಂಭಾಗವನ್ನು ಸ್ಕ್ಯಾನಿಂಗ್ ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್ ಸೆರೆಹಿಡಿದ ರೀತಿ ಇದು. ಒಡೆದ ಕಟ್ಟಿಗೆಯ ತುಂಡಿನ ಹಾಗೆ ಕಾಣುವ ಇದು ಸೀಳಿದ ಕೂದಲಿನ ಮುಂಭಾಗದ ಚಿತ್ರ!

### ನಾಲಿಗೆಯ ರುಚಿಗ್ರಂಥಿ

ಬಹುಶಃ ನಾಲಿಗೆ ಇಲ್ಲದಿದ್ರೆ ಪರಸ್ಪರ ಸ್ನೇಹ ಪ್ರೀತಿ ಇರುತ್ತಿರಲಿಲ್ಲ ಮತ್ತು ಊಟದ ರುಚಿಯೂ ಗೊತ್ತಾಗುತ್ತಿರಲಿಲ್ಲ. ರುಚಿ ತಿಳಿಸಲು ನಾಲಿಗೆಯಲ್ಲಿರುವ ಲಕ್ಷಾಂತರ ರುಚಿ ಗ್ರಂಥಿಗಳೇ ಕಾರಣ. ಮಾನವನ ನಾಲಿಗೆಯಲ್ಲಿ 10 ಸಾವಿರ ರುಚಿ ಗ್ರಂಥಿಗಳಿರುತ್ತವೆ. ಅಂತಹ ಗ್ರಂಥಿಗಳಲ್ಲಿಯ ಒಂದು ಗ್ರಂಥಿಯನ್ನು ಸ್ಕ್ಯಾನಿಂಗ್ ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್ ಸಹಾಯದಿಂದ ಸೆರೆ ಹಿಡಿಯಲಾಗಿದೆ. ಇಂಥ ಗ್ರಂಥಿಗಳ ಸಹಾಯದಿಂದ ಉಪ್ಪು, ಹುಳಿ, ಖಾರ, ಸಿಹಿ ಮತ್ತು ಕಹಿಯ ರುಚಿ ಅನುಭವಿಸಬಹುದು.

### ರಕ್ತ ಹೆಪ್ಪುಗಟ್ಟುವಿಕೆ

ರಕ್ತಸ್ರಾವದ ಒಳಗುಟ್ಟು ನೋಡಿ ಹೇಗಿದೆ. ಗಾಯವಾದ ಕೆಲ ಕ್ಷಣದಲ್ಲಿಯೇ ಆ ಭಾಗದಲ್ಲಿ ರಕ್ತವು 1-2 ನಿಮಿಷಗಳಲ್ಲಿ (ಪ್ರತಿಯೊಬ್ಬರ ರಕ್ತ ಹೆಪ್ಪುಗಟ್ಟುವ ಸಮಯ ಬೇರೆ ಬೇರೆಯಾಗಿರುತ್ತದೆ) ಎಳೆ ಎಳೆಯಾದ (ಜೇಡರ ಬಲೆಯ)ರೂಪಕ್ಕೆ ಬದಲಾಯಿಸುತ್ತದೆ. ಈ ಎಳೆಗಳ ಸಂದುಗಳಲ್ಲಿ ಕೆಂಪು ಮತ್ತು ಬಿಳಿ ರಕ್ತ ಕಣಗಳು ಸಿಲುಕಿ ರಕ್ತಸ್ರಾವ ನಿಲ್ಲುತ್ತದೆ. ಬಿಳಿ ರಕ್ತಕಣ ತಿಳಿ ಹಳದಿ ಬಣ್ಣದಲ್ಲಿ ಕಾಣುತ್ತದೆ.

### ಕರುಳಿನ ಒಳಭಾಗ

ಜೀರ್ಣವಾದ ಆಹಾರ ಸಣ್ಣ ಕರುಳಿನ ಒಳಭಾಗದ ಗೋಡೆಯ ಮುಖಾಂತರ ಹೀರಲ್ಪಟ್ಟು ದೇಹದ ಇತರೆ ಭಾಗಕ್ಕೆ ಶಕ್ತಿಯಾಗಿ ಮಾರ್ಪಡುವುದು. ಜೀರ್ಣಗೊಂಡ ಆಹಾರ ಕಣಗಳು ಬೃಹದಾಕಾರವಾಗಿ ಗೋಚರಿಸುತ್ತವೆ.

### ಅಂಡಾಣುವಿನ ಹೊರ ಮೈ ಮತ್ತು ಕೊರೊನಲ್ ಕೋಶ

ಸ್ತ್ರೀಯರ ಅಂಡಾಣುವಿನ ನೇರಳೆ ಬಣ್ಣದ ಹೊರ ಮೈ 'ಝೋನಾ ಪೆಲಿಕೂಡಾ' ಮತ್ತು ಗ್ಲೈಕೊ ಪ್ರೋಟೀನ್‌ನಿಂದ ರಕ್ಷಿಸಲ್ಪಟ್ಟಿದೆ. ಹೆಚ್ಚು ವೀರ್ಯಾಣುಗಳನ್ನು ಸೆಳೆದು ಹಿಡಿದಿಡುವ ಕೆಲಸವನ್ನೂ ಇವು ನಿರ್ವಹಿಸುತ್ತವೆ. ಮೇಲ್ಭಾಗಲ್ಲಿ ಎರಡು ತಿಳಿ ಗುಲಾಬಿ ಬಣ್ಣದ ಕೊರೊನಲ್ ಕೋಶಗಳನ್ನು ಚಿತ್ರದಲ್ಲಿ ಕಾಣಬಹುದು.

### ಹಲ್ಲುಗಳ ಕಲೆ

ಪ್ರತಿದಿನ ಎರಡು ಬಾರಿ ಹಲ್ಲು ಉಜ್ಜದಿದ್ದರೆ, ಗುಟ್ಕಾ, ಎಲೆ ಅಡಿಕೆ ತಂಬಾಕು ಅಗಿಯುವುದರಿಂದ ಹಲ್ಲುಗಳ ಸಂದು ಮತ್ತು ಹೊರ-ಒಳಮೈಗೂ ಕಂದು ಅಥವಾ ಕಪ್ಪು ಬಣ್ಣದ ಕಲೆಗಳಾಗುತ್ತವೆ.

### ಸ್ತನ ಕ್ಯಾನ್ಸರ್ ರೋಗಾಣು.

ಇತ್ತೀಚೆಗೆ ಸ್ತನ ಕ್ಯಾನ್ಸರ್ ತುಂಬಾ ಸಾಮಾನ್ಯವಾಗಿದೆ. ಕ್ಯಾನ್ಸರಿನಿಂದ ಸತ್ತ ಜೀವಕೋಶಗಳು ಹಳದಿ ಬಣ್ಣದ ಗೊಂಚಲಿನಂತೆ ಕಾಣುತ್ತವೆ.

### ಆರು ದಿನದ ಭ್ರೂಣ.

ಗರ್ಭಧಾರಣೆಯಾದ ನಂತರ ಹೆರಿಗೆಗೆ ನವಮಾಸಗಳಾದರೂ ಬೇಕು. SEM ಮುಖಾಂತರ ಭ್ರೂಣದ ಚಿತ್ರ ಸೆರೆ ಹಿಡಿದಾಗ (ಮಧ್ಯ ಹಳದಿ ಬಣ್ಣದ) ಈ ರೀತಿ ಕಾಣಿಸುತ್ತದೆ. ಇದು ಕೇವಲ ಆರು ದಿವಸದ ಭ್ರೂಣ.

ಎಲೆಕ್ಟ್ರಾನಿಕ್ ಮೈಕ್ರೋಸ್ಕೋಪ್‌ನಲ್ಲಿ ಕಾಣುವ ಕೂದಲಿನ ತುದಿ (ಎಡಚಿತ್ರ), ನಾಲಿಗೆಯ ರುಚಿಗ್ರಂಥಿ (ಮಧ್ಯ) ಹಾಗೂ ಆರು ದಿನಗಳ ಭ್ರೂಣ

